PW-1

**(ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಬೋಧಿಸಲಾಯಿತು)**
**ಪಾಟೀ ಸವಾಲುಃ ಶ್ರೀ ಎಂ.ಜಿ., 1ನೇ ಎದುರುದಾರರ ಪರ ವಕೀಲರಿಂದ**

ದಿಃ09.07.2008ರಂದು ಅಸಲು ದಾವೆ ಸಂಖ್ಯೆ-363/2006ರಲ್ಲಿ ಹೊರಡಿಸಿದ ಆದೇಶವು ನನ್ನ ಗಮನದಲ್ಲಿ ಇರುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿಯು ಸರ್ವೆ ಅಧಿಕಾರಿಗಳು ಜಮೀನಿನ ಅಳತೆಗೆ ಬಂದಾಗ ನನಗೆ ಮಾಹಿತಿ ತಿಳಿದುಬಂದಿರುತ್ತದೆ ಎಂದು ಸಾಕ್ಷಿ ನುಡಿಯುತ್ತಾರೆ. ಸದರಿ ಪ್ರಕರಣದಲ್ಲಿ ನಾನು ಸಮನ್ಸ್ ಅನ್ನು ಸ್ವೀಕರಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಈ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು, ನನ್ನ ತಂದೆಯ ಹೆಸರು ನಂಜುಂಡೇಗೌಡ ಆದರೆ ನ್ಯಾಯಾಲಯದಿಂದ ಬಂದ ಸಮನ್ಸ್ ನಲ್ಲಿ ಮೂಗೇಗೌಡ ಎಂಬ ಹೆಸರಿನಲ್ಲಿ ಇದ್ದುದರಿಂದ ನಾನು ಸದರಿ ಸಮನ್ಸ್ ಅನ್ನು ವಾಪಸ್ ಕಳುಹಿಸಿರುತ್ತೇನೆ ಎಂದು ಸಾಕ್ಷಿ ನುಡಿಯುತ್ತಾರೆ. ಎಫ್.ಡಿ.ಪಿ. ಪ್ರಕರಣದಲ್ಲಿ ನಾನು ಪಕ್ಷಗಾರನಾಗಿರುತ್ತೇನೆ ಎಂದರೆ ಸಾಕ್ಷಿಯು ನನಗೆ ಈ ಬಗ್ಗೆ ತಿಳಿದಿರುವುದಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ಅಸಲು ದಾವೆ ಸಂಖ್ಯೆ-363/2006ರಲ್ಲಿ ಅಂತಿಮ ಆದೇಶ ಹೊರಡಿಸಿದ ನಂತರ ಈ ಪ್ರಕರಣದ 1 ರಿಂದ 5ನೇ ಎದುರುದಾರರು ಸರ್ವೆ ಅಧಿಕಾರಿಗಳರವರಲ್ಲಿ ಹದ್ದುಬಸ್ತ್ ಮಾಡಿಕೊಡಲು ಅರ್ಜಿ ಸಲ್ಲಿಸಿರುವ ವಿಚಾರ ನನಗೆ ತಿಳಿದಿರುತ್ತದೆ ಎಂದರೆ ಸರಿಯಲ್ಲ. ಈ ಪ್ರಕರಣದ 7 ರಿಂದ 9ನೇ ಎದುರುದಾರರ ಪರಿಚಯವಿರುವುದಿಲ್ಲ ಹಾಗೂ ಸಂಬಂಧವಿರುವುದಿಲ್ಲ. ನನ್ನ ತಂದೆಯ ಹೆಸರು ನಂಜುಂಡೇಗೌಡ, ಆದರೆ ನ್ಯಾಯಾಲಯದಿಂದ ಬಂದ ಸಮನ್ಸ್ ನಲ್ಲಿ ಮೂಗೇಗೌಡ ಎಂಬ ಹೆಸರಿನಲ್ಲಿ ಇದ್ದುದರಿಂದ ನಾನು ಸದರಿ ಸಮನ್ಸ್ ಅನ್ನು ವಾಪಸ್ ಕಳುಹಿಸಿರುತ್ತೇನೆ ಎಂಬ ವಿಚಾರವನ್ನು ನನ್ನ ಮುಖ್ಯವಿಚಾರಣೆ ಪ್ರಮಾಣಪತ್ರದಲ್ಲಿ ನಮೂದಿಸಿರುತ್ತೇನೆ. ನಾನು ಈ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸುಮಾರು 5 ವರ್ಷಗಳ ಹಿಂದೆ ನನಗೆ ಅಸಲು ದಾವೆ ಸಂಖ್ಯೆ-363/2006ರಲ್ಲಿ ಅಂತಿಮ ಆದೇಶ ಹೊರಡಿಸಿದ ವಿಚಾರ ನನ್ನ ಗಮನದಲ್ಲಿರುತ್ತದೆ. ಆದರೆ ನಿಖರವಾದ ದಿನಾಂಕ ಮತ್ತು ತಿಂಗಳು ನನಗೆ ನೆನಪಿರುವುದಿಲ್ಲ. ಸರ್ವೆ

ಅಧಿಕಾರಿಗಳು ಸರ್ವೆಗೆ ಬರುವ ಮುನ್ನ ನನಗೆ ಯಾವುದೇ ನೋಟೀಸ್ ಅನ್ನು ನೀಡಿರುವುದಿಲ್ಲ. ಅಸಲು ದಾವೆ ಸಂಖ್ಯೆ-363/2006ರಲ್ಲಿ ಹೊರಡಿಸಿದ ಅಂತಿಮ ಆದೇಶದ ವಿಚಾರ ನನ್ನ ಗಮನದಲ್ಲಿ ಇಲ್ಲದೇ ಇದ್ದುದರಿಂದ ತಕ್ಷಣ ಮೇಲ್ಮನವಿಯನ್ನು ಸಲ್ಲಿಸಲು ಆಗಿರುವುದಿಲ್ಲ. ನಾನು ಈ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ಪ್ರಮಾಣಪತ್ರದಲ್ಲಿ ಆರ್ಥಿಕ ಹಾಗೂ ಇನ್ನಿತರೆ ಸಮಸ್ಯೆಗಳಿಂದ ಸಕಾಲದಲ್ಲಿ ಮೇಲ್ಮನವಿಯನ್ನು ಸಲ್ಲಿಸಲು ಸಾಧ್ಯವಾಗಿರುವುದಿಲ್ಲ ಎಂದು ಹೇಳಿ ಬರೆಯಿಸಿರುವುದಿಲ್ಲ. ಇತ್ತೀಚಿನ ದಿನಗಳಲ್ಲಿ ದಾವಾ ಸ್ವತ್ತಿನ ಮೌಲ್ಯ ಹೆಚ್ಚಾದ ಕಾರಣ ಎದುರುದಾರರಿಗೆ ತೊಂದರೆ ನೀಡುವ ಸಲುವಾಗಿ ಸುಳ್ಳು ಕಾರಣಗಳನ್ನು ನೀಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯವಿಚಾರಣೆ ಪ್ರಮಾಣಪತ್ರದಲ್ಲಿ ಕಾಲ ವಿಳಂಬ ಮನ್ನಾ ಮಾಡಲು ಸರಿಯಾದ ಸಕಾರಣಗಳನ್ನು ನಮೂದಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ - ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ. ಎಂದು ಸಾಕ್ಷಿ ಒಪ್ಪಿರುತ್ತಾರೆ.

**(ಕುಮಾರ್ ಹೆಚ್.ಎನ್)**
2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕನಕಪುರ, ಬೆಂಗಳೂರು ದಕ್ಷಿಣ ಜಿಲ್ಲೆ.

**2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಕನಕಪುರ, ಬೆಂಗಳೂರು ದಕ್ಷಿಣ ಜಿಲ್ಲೆ.**

<u>ಮಿಸ್.5001/2021</u>

ದಿ:03.01.2026
RW-1

| | | |
|---|---|---|
| ಹೆಸರು | : | |
| ತಂದೆಯ ಹೆಸರು | : | |
| ವಯಸ್ಸು | : | |
| ಉದ್ಯೋಗ | : | |
| ವಾಸ | : | |

(ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು)
<u>**ಮುಖ್ಯವಿಚಾರಣೆ: ಎದುರುದಾರರ ಪರ ವಕೀಲರಿಂದ**</u>

ನಾನು ಈ ಪ್ರಕರಣದಲ್ಲಿ ಎದುರುದಾರನಿದ್ದು ನನ್ನ ಮುಖ್ಯ ವಿಚಾರಣೆಗೆ ಬದಲಾಗಿ ಸಾಕ್ಷ್ಯ ಪ್ರಮಾಣಪತ್ರವನ್ನು ಸಲ್ಲಿಸಿದ್ದು ಮತ್ತು ಅದರಲ್ಲಿ ಬರೆದಿರುವ ಎಲ್ಲಾ ವಿಚಾರಗಳು ಸತ್ಯವಾಗಿವೆ ಹಾಗೂ ಅದಕ್ಕೆ ನಾನು ರುಜು ಮಾಡಿರುತ್ತೇನೆ.

ನನ್ನ ಮುಖ್ಯ ಸಾಕ್ಷಿಗೆ ಪೂರಕವಾಗಿ ಈ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ.

<u>**ಎದುರುದಾರರ ಪರ ವಕೀಲರ ವಿನಂತಿ ಮೇರೆಗೆ ಹೆಚ್ಚಿನ ಮುಖ್ಯವಿಚಾರಣೆಯನ್ನು ಮುಂದೂಡಲಾಯಿತು.**</u>

<u>**ಪಾಟೀ ಸವಾಲು: ಶ್ರೀ ಸಿ.ಎಂ.ಜೆ. ವಕೀಲರಿಂದ 1 ನೇ ಎದುರುದಾರರ ಪರವಾಗಿ**</u>

**ಮರುವಿಚಾರಣೆ - ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ. ಎಂದು ಸಾಕ್ಷಿ ಒಪ್ಪಿರುತ್ತಾರೆ.

**(ಕುಮಾರ್ ಹೆಚ್.ಎನ್)**
2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕನಕಪುರ, ಬೆಂಗಳೂರು ದಕ್ಷಿಣ ಜಿಲ್ಲೆ.